International Journal of Kannada Research
www.kannadajournal.com

ISSN: 2454–5813
IJKR 2020; 6(3): 33-37
© 2020 IJKR
www.kannadajournal.com
Received: 25-05-2020
Accepted: 27-06-2020

**ಡಾ. ಅನಿತಾ ಕೆ. ಗುಡಿ**
ಸಹಾಯಕ ಪ್ರಾಧ್ಯಾಪಕರು
ಡಾ.ಆರ್.ಸಿ. ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ

**Corresponding Author:**
**ಡಾ. ಅನಿತಾ ಕೆ. ಗುಡಿ**
ಸಹಾಯಕ ಪ್ರಾಧ್ಯಾಪಕರು
ಡಾ.ಆರ್.ಸಿ. ಹಿರೇಮಠ ಕನ್ನಡ
ಅಧ್ಯಯನ ಪೀಠ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ

# ದಾಸಸಾಹಿತ್ಯದ ಮೊದಲಘಟ್ಟ

**ಡಾ. ಅನಿತಾ ಕೆ. ಗುಡಿ**

ಧರ್ಮ ಮತ್ತು ರಾಜಕೀಯ ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗ ಸಾಹಿತ್ಯ ಅದರ ಸ್ಥಾನವನ್ನು ತುಂಬಬೇಕು. ಹಾಗೆಯೇ ವಚನ ಮತ್ತು ದಾಸಸಾಹಿತ್ಯ ಈ ಕೆಲಸವನ್ನು ಮಾಡಿದೆ. ಹರಿದಾಸ ಸಾಹಿತ್ಯದ ಮೊದಲ ಘಟ್ಟ 16ನೆಯ ಶತಮಾನವೆಂದು ವಿದ್ವಾಂಸರು ಗುರುತಿಸಿದ್ದಾರೆ. ಕೃತಿಗಳ ವಸ್ತುವೈವಿಧ್ಯ, ವಿಫುಲತೆ, ಸರಳ, ಸುಲಭ ಭಾಷೆಯ ಬಳಕೆ, ಸುಲಲಿತ ನಿರೂಪಣೆ, ಕಾವ್ಯಾತ್ಮಕ ಅಭಿವ್ಯಕ್ತಿಗಳು ಈ ಘಟ್ಟದ ಪ್ರಮುಖ ಲಕ್ಷಣಗಳು. ಕನ್ನಡ ನಾಡಿನ ಭಕ್ತಿ ಪರಂಪರೆಯಲ್ಲಿ ಹರಿದಾಸರು **"ವಚನ"** ಮಹಾನುಭಾವರ ಸಂಪ್ರದಾಯಕ್ಕೆ ಉತ್ತರಾಧಿಕಾರಿಗಳಾಗಿ ಬಂದ ಮಹಾನುಭಾವರು. ಇದು ಚಾರಿತ್ರಿಕ ಸಂಗತಿ. ಈ ಕಾಲಕ್ಕೆ ಭಕ್ತಿ ತತ್ವವು ದ್ವೈತ ಸಿದ್ಧಾಂತದಿಂದಲೂ, ದ್ವೈತಸಿದ್ಧಾಂತದ ಅನುಯಾಯಿಗಳಾದ ಹರಿದಾಸರಿಂದಲೂ ಹೆಚ್ಚಿನ ಪುಷ್ಟಿ ಪಡೆದು ಬೆಳಯಿತು. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಮತ್ತು 15ನೆಯ ಶತಮಾನದ ದಾಸಸಾಹಿತ್ಯ ಕನ್ನಡ ಸಾಹಿತ್ಯದ ಇತಿಹಾಸದಲ್ಲೇ ಜನಮುಖಿ ಮತ್ತು ಸಂವೇದನಾತ್ಮಕ ಸಾಹಿತ್ಯದ ಎರಡು ಮುಖ್ಯ ಘಟ್ಟಗಳು.

ಶರಣ ಸಿದ್ಧಾಂತದಂತೆ ಹರಿದಾಸ ಸಿದ್ಧಾಂತವೂ ಸಹ ಅದ್ವೈತ ವಿದ್ವಾಂಸರ ತರ್ಕ, ಭಾಷ್ಯಾದಿ ಬುದ್ಧಿ ಮಾತ್ರ ಗಮ್ಯವಾದ ಮೀಮಾಂಸೆ ನೀಡಿದ ಉತ್ತರವಾಗಿತ್ತು. ಹರಿದಾಸರು ಶ್ರುತಿ, ಸ್ಮೃತಿ, ಪುರಾಣೇತಿಹಾಸಗಳಲ್ಲಿ ಅಚಲ ಶ್ರದ್ಧೆಯವರಾಗಿದ್ದರು. ವೇದೋಪನಿಷತ್ತುಗಳೇ ಮುಂತಾದ ಪುರಾತನ ಧರ್ಮಗ್ರಂಥಗಳಿಲ್ಲದ್ದ ತತ್ತ್ವ ಜಿಜ್ಞಾಸೆಯನ್ನೂ, ಹಿಂದಿನ ಧರ್ಮಜಿಜ್ಞಾಸುಗಳ ಗಾಂಭೀರ್ಯವನ್ನು, ಸಂಸ್ಕೃತ ಭಾಷಾ ವೈಖರಿಯನ್ನು ಪುನರುಜ್ಜೀವನಗೊಳಿಸಿದುದಲ್ಲದೆ, ದೇಶ ಭಾಷೆಯಾದ ಕನ್ನಡಲದಲ್ಲಿ ಆ ತತ್ತ್ವಗಳನ್ನೆಲ್ಲ ವಿವರಿಸಿ, "ಭಾಷಾವೃದ್ಧಿಗೂ" ಹರಿದಾಸರು ಅವಕಾಶ ಮಾಡಿಕೊಟ್ಟರು. ಭಗವಂತನ ಸಖ್ಯಸಾಧನೆಯೇ ಹರಿದಾಸರ ಧರ್ಮಸಾರ.

ಶರಣಸಾಹಿತ್ಯ ದಾಸಸಾಹಿತ್ಯಗಳೆರಡೂ ಸಾಮಾಜಿಕ ಕಳಕಳಿಯಿರುವ ಸಾಹಿತ್ಯ ಪ್ರಕಾರಗಳು. ವಚನ ಸಾಹಿತ್ಯವು "ವೈದಿಕಧರ್ಮಕ್ಕೆದುರಾಗಿ" ಸೆಡ್ಡು ಹೊಡೆದು ನಿಂತು ಒಂದು ಸಾಮಾಜಿಕ ಕ್ರಾಂತಿಯನ್ನೇ ಆಗುಮಾಡಿದ ಶಕ್ತಿಯುತ ಸಾಹಿತ್ಯ. ಆದರೆ ದಾಸಸಾಹಿತ್ಯ ಇಸ್ಲಾಂ ಧರ್ಮಕ್ಕೆದುರಾಗಿ ತಲೆಯೆತ್ತಿ ನಿಂತಿದ್ದಲ್ಲದೇ ನಿಂತ ನೀರಾಗಿ ನಾರಲಾರಂಭಿಸಿದ್ದ "ವೈದಿಕ ಧರ್ಮಕ್ಕೆ" ಹೊಸ ಅರ್ಥವನ್ನು ಕೊಟ್ಟ ಸಾಹಿತ್ಯ.[1] ವಚನ ಸಾಹಿತ್ಯ "ಹರ" ಪಾರಮ್ಯವನ್ನು ಹೇಳಿದರೆ, ದಾಸಸಾಹಿತ್ಯ ಹರಿಸರ್ವೋತ್ತಮತ್ವವನ್ನು ಸಾರುತ್ತದೆ. ಒಟ್ಟಾರೆ ಭಕ್ತಿ, ತತ್ತ್ವಗಳ ಹಿನ್ನೆಲೆಯಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ಎತ್ತಿಹಿಡಿದು ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡಿದ ಸಾಹಿತ್ಯ ಪ್ರಕಾರವಾಗಿದೆ.

ಭಾರತದ ಸಂತರು ನಮ್ಮ ನಾಡಿನ ಸಂಸ್ಕೃತಿಯ ಜೀವನಾಡಿಯಾದ ಆಸ್ತಿಕತೆ, ಆಧ್ಯಾತ್ಮಿಕತೆಗಳನ್ನು ಬೋಧಿಸುವ ಮೂಲಕ ಜೀವನದ ಕಡುವೈರಾಗ್ಯದ ಸ್ಥಿತಿಯಲ್ಲೂ ಆಸ್ತಿಕತೆಯ ಹಂತದಲ್ಲಿ ಭಕ್ತಿಯ ನೆಲೆಯಲ್ಲಿ ಆಶೆಯ ಹಣತೆ ಹಚ್ಚಿದವರು ನಮ್ಮ ದಾಸರು. ಅಧಿಕಾರಿಗಳು, ರಾಜಕಾರಣಿಗಳು, ಯುದ್ಧಗಳು, ಕೊಲೆ, ಸುಲಿಗೆ ಇವುಗಳ ಮಧ್ಯೆ ಇಡೀ ರಾಷ್ಟ್ರ ನುಚ್ಚುನೂರಾಗಿತ್ತು. ಈ ಸಂದರ್ಭದಲ್ಲಿ ರಾಷ್ಟ್ರದ ಏಕತೆಯನ್ನು ತಮ್ಮ ಭಕ್ತಿಪಂಥದ ಮೂಲಕ ಒಂದುಗೂಡಿಸಿದವರು ಈ ದಾಸರು.

ಹೇಳಲು ಹೆಸರಿಲ್ಲದಂತೆ ನಮ್ಮ ಸಂಸ್ಕೃತಿ ಮಹಮ್ಮದೀಯ ಸೇನಾಪತಿಗಳ ಕೈಗೆ ಸಿಲುಕಿ ಹೋಗಿತ್ತು. ಭಕ್ತಿಯ ಒಂದು ಆಂದೋಲನವನ್ನೇ ಎಬ್ಬಿಸಿ ಜನರ "ಸಂತ್ರಸ್ತ" ಮನಸ್ಸಿಗೆ 'ಭಕ್ತಿ'ಯ ಅವಲಂಬನೆಯನ್ನಿತ್ತರು. ಈ ಭಕ್ತಿ ಪಂಥದ ಆಂದೋಲನದಲ್ಲಿ 'ಜ್ಞಾನದೇವ', 'ತುಕಾರಾಮಾ'ದಿಗಳು, ಗುಜರಾತಿನಲ್ಲಿ 'ನರಸೀ ಮೆಹತಾ', ಬಂಗಾಳದಲ್ಲಿ 'ಚೈತನ್ಯಾದಿಗಳು', ಉತ್ತರ ಭಾರತದಲ್ಲಿ 'ಕಬೀರ

[1] ದಾಸ ಸಾಹಿತ್ಯ ಸೌರಭ, ಟಿ.ಎನ್. ನಾಗರತ್ನ, ಪು–೧

ಸೂರದಾಸ್', 'ಮೀರಾ', ದಕ್ಷಿಣ ಭಾರತ ತಮಿಳು 'ಆಳ್ವಾರರು' ನಾಯನ್ಮಾರರು, ಕೇರಳದಲ್ಲಿ ಚೇರುಶ್ಶೇರಿ' ಎಳುತ್ತಚ್ಚನ್ ಈ ಮೊದಲಾದ ಸಂತದಾರ್ಶನಿಕರು ಜನರಿಗೆ ಭಕ್ತಿಯ ಹುಚ್ಚನ್ನೇ ಹಿಡಿಸಿದರು. ಇಹಲೋಕವನ್ನು ಮರೆತು ಆಧ್ಯಾತ್ಮದ ಅಮಲಿನಲ್ಲಿ ಮೈಮರೆಯುವಂತೆ ನೋಡಿಕೊಂಡರು. ಇದರಲ್ಲಿ ಕರ್ನಾಟಕದ ಹರಿದಾಸಕೂಟವು ಹರಿಭಕ್ತಿಯ ಪ್ರಚಾರ ನಡೆಸಿತು.

ಹಾಗೇ ಕರ್ನಾಟಕದ ದಾಸಸಾಹಿತ್ಯವೆಂದ ಕೂಡಲೇ ಸಾಮಾನ್ಯವಾಗಿ ನೆನಪಾಗುವುದು 'ಪುರಂದರದಾಸರು' ಮತ್ತು 'ಕನಕದಾಸರು'. ವೈದಿಕ ಪರಂಪರೆಯ ಆಚಾರ್ಯತ್ರಯರಲ್ಲಿ ವೈಷ್ಣವಸಂತರ ಗುರು–ಶಿಷ್ಯ ಪರಂಪರೆಯೇ ಬೆಳೆದು ಬಂದಿದೆಯೆಂಬುದು ಗಮನಾರ್ಹ ಸಂಗತಿ. ಆಚಾರ್ಯತ್ರಯರು ಶ್ರೀಶಂಕರಾಚಾರ್ಯರು ಶ್ರೀ ರಾಮಾನುಜಾಚಾರ್ಯರು, ಶ್ರೀಮಧ್ವಾಚಾರ್ಯರು ಇವರಲ್ಲಿ ಒಬ್ಬರಾದ ಶ್ರೀಮಧ್ವಾಚಾರ್ಯರು ಪ್ರಚುರ ಪಡಿಸಿದ ದ್ವೈತಸಿದ್ಧಾಂತದ ಹಿನ್ನೆಲೆಯಲ್ಲಿ ಹರಿಪಾರಮ್ಯವನ್ನು ಒಪ್ಪಿಕೊಂಡು ಭಕ್ತಿಸಾಧನೆಮಾಡಿ ದೈವ ಸಾಕ್ಷಾತ್ಕಾರವನ್ನು ಪಡೆದವರು ಕರ್ನಾಟಕದ ಹರಿದಾಸರು. ಈ ದಾಸರಿಗೆ ಶ್ರದ್ಧೆ ಸ್ತೋತ್ರಗಳೇ ಭಕ್ತಿಯ ಸಾರಸರ್ವಸ್ವ. ಹರಿದಾಸರಲ್ಲಿ 'ವ್ಯಾಸಕೂಟ' ಮತ್ತು 'ದಾಸಕೂಟ' ಎಂಬ ಎರಡು ಪಂಗಡಗಳಿದ್ದವು. ಆದರೆ ಎರಡೂ ಕೂಟಗಳ ದಾಸರು ಮಧ್ವಾಚಾರ್ಯರ ದ್ವೈತ ತತ್ವದ ಪ್ರಚಾರಕರಾಗಿದ್ದರು. ಶ್ರೀ ಕೃಷ್ಣಪರಮಾತ್ಮನ ಭಕ್ತಿಯನ್ನು ಹರಡುವುದಕ್ಕೆ ಎರಡೂ ಪಂಗಡಗಳ ಕೀರ್ತನೆಗಳನ್ನು ಬಳಸಿಕೊಂಡರು.

"ಶ್ರೀಹರಿಸರ್ವೋತ್ತಮ ವಾಯುಜೀವೋತ್ತಮ ತತ್ವಃ, ಲಕ್ಷ್ಮೀದೇವಿಯರಾದಿಯಾಗಿ ಮನುಷ್ಯಮಾತ್ರರವರೆಗೆ, ವಾಯುದೇವರು, ಬ್ರಹ್ಮದೇವರು, ಗರುಡ–ಶೇಷ–ರುದ್ರರು ಎಲ್ಲ ದೇವಾನುದೇವತೆಗಳೂ ಸೇರಿದಂತೆ ತಾರತಮ್ಯನುಪಾರವಾಗಿ ಅವರವರ ಸ್ಥಾನ ನಿರ್ದೇಶವನ್ನು ಕಲ್ಪಿಸಿರುವ ತಾರತಮ್ಯ ತತ್ವಃ ಜಗತ್ತು, ಸತ್ಯ, ಪರಿಚ್ಛೇದಗಳು ನಿತ್ಯ– ಇವೇ ಮೊದಲಾದ ದ್ವೈತ ತತ್ತ್ವಗಳನ್ನು ಸಂಗೀತ ಮಾಧ್ಯಮದಿಂದ ಕನ್ನಡ ಭಾಷೆಯಲ್ಲಿ ಕೀರ್ತನಗಾಗಿ ಹಾಡಿರುವವರು ಹರಿದಾಸರು".[2]

ಒಂದೆಡೆ ತತ್ತ್ವವಿಚಾರಗಳು, ಮತ್ತೊಂದೆಡೆ ಬದುಕಿನ ಉತ್ತಮ ಮೌಲ್ಯಗಳನ್ನು ಜೀವನಾನುಭವದೊಂದಿಗೆ ಜನರೆದರು ತಂದರು. "ಪ್ರೀತ", ಪರಸ್ಪರ ಹೃದಯಗಳನ್ನು ಹತ್ತಿರ ತರಬಲ್ಲದು ಗೆಲ್ಲಬಲ್ಲದು ಎನ್ನುವ ಒಳಗುಟ್ಟನ್ನು ಅರಿತ ಹರಿದಾಸರು, ಪ್ರೀತಿಯ ಉತ್ಕಟತೆಯೇ ಭಕ್ತಿಯೆಂದು ಅರಿತರು. ಈ ವೈಷ್ಣವ ಸಂತರ ಗುರು–ಶಿಷ್ಯರ ಪರಂಪರೆ ಇಂದಿಗೂ ಉಳಿದುಕೊಂಡು ಬಂದಿದೆ.

ಹಾಗದರೆ ಈ ದಾಸ ಸಾಹಿತ್ಯ ಎಲ್ಲಿಂದ ಪ್ರಾರಂಭ? ಯಾರಿಂದ ಪ್ರಾರಂಭ ಎನ್ನುವ ಚರ್ಚೆ ವಿದ್ವಾಂಸರಲ್ಲಿ ಸಾಕಷ್ಟು ನಡೆದಿದೆ. ಕ್ರಿ.ಶ. 9ನೆಯ ಶತಮಾನದಲ್ಲಿದ್ದ 'ಅಚಲಾನಂದದಾಸರು" ಸಾಹಿತ್ಯದ ಮೊದಲಿಗರೆಂದು ಕೆಲವರ ಗ್ರಹಿಕೆ. ಮಧ್ವಾಚಾರ್ಯರ ಸಮಕಾಲೀನರಾದ ಕ್ರಿ.ಶ. 1275 ನರಹರಿತೀರ್ಥರಿಂದ ಪ್ರಾರಂಭವಾಯತೆಂದು ಕೆಲವರ ಅಭಿಪ್ರಾಯ, ಈ ಎರಡು ಅಭಿಪ್ರಾಯ ಹಿಂದೆ ಬಿದ್ದು ಶ್ರೀಪಾದರಾಜರೇ ಕ್ರಿ.ಶ. 1500 ಕೀರ್ತನಕ್ಕೆ ಮೊದಲಿಗರೆಂದು ಗೃಹಿತ.

ಕನ್ನಡ ಸಾಹಿತ್ಯದ ವಿದ್ವಾಂಸಲೋಕರಾದ ಡಾ. ಜಿ.ವರದರಾಜರು ತಮಗೆ ದೊರೆತ ಓಲೆಗರಿಗಳ ಮಾಹಿತಿಯಿಂದ 9ನೆಯ ಶತಮಾನದಲ್ಲಿ ಮಠಾಧಿಪತಿಗಳಾಗಿದ್ದ ಅಚಲಾನಂದದಾಸರೇ ಮೊದಲು ದಾಸರೆಂದು ವಾದಿಸಿದ್ದಾರೆ. "ಆದರೆ ಶ್ರೀರಂಗಪಟ್ಟಣದ ಬಳಿಯ ತೊಣ್ಣುರು ದೇವಾಲಯದ ಕ್ರಿ.ಶ. 1722ರ ತಾಮ್ರ ಶಾಸನ ಹೆಸರಿಸಬಹುದು, ಮತ್ತು ಹಾಸನ ಜಿಲ್ಲೆಯ ಆಲೂರು ತಾಲೂಕಿನ ನಲ್ಲೂರು ಶಾಸನವನ್ನೂ ಗಮನಿಸಬಹುದು. ಈ ಶಾಸನಗಳ ಪ್ರಾಮಾಣ್ಯ ಕ್ರಿ.ಶ. 18ನೆಯ ಶತಮಾನದಲ್ಲಿ ಒಬ್ಬರು ಅಚಲಾನಂದದಾಸರಿದ್ದುದನ್ನು ಸ್ಪಷ್ಟಪಡಿಸುತ್ತಾರೆ. ಮತ್ತು ದೊರೆತಿರುವ ಅಚಲಾನಂದವಿಠಲ ಅಂಕಿತದ ಕೀರ್ತನೆಗಳು ತಮ್ಮ ಭಾಷಾರೂಪದಿಂದಲೂ ಕಾಲಮಾನದಿಂದಲೂ ಇತ್ತೀಚಿನವರಾದ ಈ ಅಚಲಲಾನಂದರವೆಂದು ತಿಳಿದುಬರುತ್ತದೆ. ಹೀಗಾಗಿ ಅಚಲಾನಂದಾಸರ ಕಾಲ–ಭಾಷೆಗಳ ಬಗೆಗಿದ್ದ ತೊಡಕು ಬಗೆಹರಿದು, ಅವರು ಹರಿದಾಸ ಸಾಹಿತ್ಯಕ್ಕೆ ಮೊದಲಿಗನೆಂಬ ವಾದವನ್ನು ಕೈಬಿಡಬಹುದಾಗಿದೆ".[3]

ಹಾಗಾದರೆ ದಾಸರಲ್ಲಿ ಆದ್ಯರಾರೆಂದು ಮತ್ತೆ ಶೋಧಿಸಹೊರಟಾಗ ನರಹರಿತೀರ್ಥರ ಹೆಸರು ಕೇಳಿಬಂತು. ಆದರೆ ಡಾ. ಜಿ. ವರದರಾಜರು ಹಲವರು ಐತಿಹಾಸಿಕ ಕೃತಿಗಳನ್ನಿಟ್ಟುಕೊಂಡು "ಶ್ರೀಪಾದರಾಜರು" ಕನ್ನಡ ಹರಿದಾಸ ಸಾಹಿತ್ಯದ ಆಧ್ಯರೆಂದು ನಿರೂಪಿಸಿದ್ದಾರೆ. ಶ್ರೀಪಾದರಾಜರು ಶ್ರೀಮಧ್ವಚಾರ್ಯರ ನೇರ ಶಿಷ್ಯರು. ಇವರ ಕೀರ್ತನೆ ಅಂಕಿತನಾಮ 'ರಂಗವಿಠಲ' ಇಲ್ಲಿಂದ ಮುಂದೆ ಹರಿದಾಸ ಪರಂಪರೆ ಮತ್ತು ಕೀರ್ತನದ ಸಾಹಿತ್ಯ ಹುಲಸಾಗಿ ಬೆಳೆಯಿತು. ವಚನ ಸಾಹಿತ್ಯವನ್ನು ನಾವು ಹೇಗೆ ಮೂರು ಘಟ್ಟಗಳಲ್ಲಿ ನೋಡುತ್ತೇವೆ ಹಾಗೆ ದಾಸ ಸಾಹಿತ್ಯವು ಕೂಡಾ ಮೂರು ಘಟ್ಟಗಳಲ್ಲಿ ಬೆಳೆದು ಬಂದಿದೆ. "ಶ್ರೀಪಾದರಾಜರದು ದಾಸ ಸಾಹಿತ್ಯದ ಮೊದಲಿನ ಘಟ್ಟ ವಾಯಿತು. ಇದರಲ್ಲಿ ಬರುವ ದಾಸರು.

1. ಶ್ರೀಪಾದರಾಜರು ರಂಗವಿಠಲ ಕ್ರಿ.ಶ. ಸು. 1404–1500
2. ವ್ಯಾಸರಾಯರು ಶ್ರೀಕೃಷ್ಣ ಕ್ರಿ.ಶ. ಸು. 1447–1539
3. ವಾದಿರಾಜರು ಹಯವದನ ಕ್ರಿ.ಶ. 1480–1600
4. ಪುರಂದರದಾಸರು ಪುರಂದರವಿಠಲ ಕ್ರಿ.ಶ. 1484–1564
5. ಕನಕದಾಸರ ಆದಿಕೇಶವ ಕ್ರಿ.ಶ. 1508–1606
6. ಪ್ರಸನ್‌ವೆಂಕಟದಾಸರು ಪ್ರಸನ್ನವೆಂಕಟ ಕ್ರಿ.ಶ. 1680–1752
7. 7. ವಿಜಯದಾಸರು ವಿಜಯವಿಠಲ ಕ್ರಿ.ಶ. 1680–1752
8. ಗೋಪಾಲದಾಸರು ಗೋಪಾಲವಿಠಲ ಕ್ರಿ.ಶ. 1722–1762
9. 9. ಹೆಳವನಕಟ್ಟೆ ಗಿರಿಯಮ್ಮ ಹೆಳವನಕಟ್ಟರಂಗ 18ನೆಯ ಶತಮಾನ
10. 10. ಜಗನ್ನಾಥದಾಸರು ಜಗನ್ನಾಥವಿಠಲ 1728–1809
11. 11. ಹರಪನಹಳ್ಳಿ ಭೀಮವ್ವ 1823–1903
12. 12. ರಾಮದಾಸರು 18ನೆಯ ಶತಮಾನ

**1) ನರಹರಿತೀರ್ಥರು:**

ಶ್ರೀಪಾದರಾಯರಿಗಿಂತ ಮೊದಲೆ ಹದಿನಾಲ್ಕನೆ ಶತಮಾನದಲ್ಲೆ ನರಹರಿತೀರ್ಥರು ಕನ್ನಡದಲ್ಲಿ ಹರಿಕೀರ್ತನೆಗಳನ್ನು ಹಾಡಲು ಪ್ರಾರಂಭಿಸಿದ್ದರು. ನರಹರಿತೀರ್ಥರ ಕಾವ್ಯನಾಮ 'ನರಹರಿ'. ಇವರು 'ಆನಂದಭೈರವಿ', 'ಶ್ರೀರಾಗ' ಎಂದು ಕನ್ನಡ ದೇವರ ನಾಮಗಳನ್ನು ರಚಿಸಿದರು ಎಂಬ ಪ್ರತೀತಿ ಇದೆ. ಇವರು ಮಧ್ವಾಚಾರರ ಶಿಷ್ಯರು. ಇವರು ಮೂಲತಃ ಓರಿಸ್ಸಾದವರು. ಮಧ್ವಾಚಾರರು ಬದರೀಯಾತ್ರೆ ಮುಗಿಸಿ ಓರಿಸ್ಸಾ ರಾಜಧಾನಿಗೆ ಬಂದಿಳಿದರು. ಆಗ ಓರಿಸ್ಸಾ ದೇಶದ 'ಗಜಪತಿ' ಎಂಬ ಅರಸರಲ್ಲಿ ನರಹರಿತೀರ್ಥರು ದಫ್ತರದಾರರಾಗಿದ್ದು ರಾಜಪ್ರಜೆಗಳಿಗೆ ಸನ್ಮಾನ್ಯರಾಗಿದ್ದರು. ಈ ಸಂದರ್ಭದಲ್ಲಿ ಮದ್ವರ ಉಪದೇಶ ನೂತನವಾಗಿ ಕಂಡ ನರಹರಿತೀರ್ಥರು ಅವರ ಶಿಷ್ಯರಾದರು.

**2) ಶ್ರೀಪಾದ ರಾಜರು : ಕ್ರಿ.ಶ. (1404–1502)**

ಹರಿದಾಸ ಪೀಳಿಗೆಯನ್ನು ಕಥನ ಮಾಡಲು ಹೊರಟರೆ

[2] ದಾಸ ಸಾಹಿತ್ಯ ಸೌರಭ, ಟಿ.ಎನ್. ನಾಗರತ್ನ, ಪು–೨

[3] ದಾಸ ಸಾಹಿತ್ಯ ಸೌರಭ, ಟಿ.ಎನ್. ನಾಗರತ್ನ, ಪು–viii

ನಮಃಶ್ರೀಪಾದರಾಜಾಯ ಎಂಬ ಪುಣ್ಯನಾಮವನ್ನು ಪ್ರಥಮತಃಸ್ಮರಿಸಬೇಕಾಗುತ್ತದೆ. 'ವಾಗ್ವಜ್ರ'ವೆಂಬ ವಾದ ಗ್ರಂಥ ಇವರ ಪ್ರಮುಖ ಕೃತಿಯಾಗಿದೆ. ಶ್ರೀಪಾದರಾಜರು ಕನ್ನಡ ಹರಿದಾಸ ಸಾಹಿತ್ಯಕ್ಕೆ ಮೊದಲಿಗರು. ಶ್ರೀಪಾದರಾಜರ ಶಿಷ್ಯರು ವ್ಯಾಸರಾಯರು. ಶ್ರೀಪಾದರಾಜರ ಶಿಷ್ಯಪರಂಪರೆಯಿಂದ ಕೀರ್ತನ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಶ್ರೀಪಾದರಾಜರು ಮಧ್ವಾಚಾರ್ಯರ ನೇರ ಶಿಷ್ಯರು ಪದ್ಮನಾಭತೀರ್ಥರ ಪೀಳಿಗೆಯಲ್ಲಿ ಬಂದ ಎಂಟನೆಯ ಮಠಾಧಿಪತಿಗಳು ಇವರು.

ಶ್ರೀಪಾದರಾಜರು ಚನ್ನಪಟ್ಟಣದ ಅಬ್ಬೂರಿನ ಶೇಷಗಿರಿ ಆಚಾರ್ಯ ಗಿರಿಯಮ್ಮ ದಂಪತಿಳ ಮಗ. ಇವರ ಹುಟ್ಟು ಹೆಸರು ಲಕ್ಷ್ಮೀನಾರಯಣ. ಸನ್ಯಾಸ ದೀಕ್ಷೆಯಿತ್ತ ಗುರು ಶ್ರೀಸ್ವರ್ಣತೀರ್ಥರು. ವೇದಾಂತ ವಿದ್ಯಾಗುರು ಶ್ರೀ ವಿಭುದೇಂದ್ರತೀರ್ಥರು. ಇವರ ವಿದ್ವತ್ತನ್ನು ಮೆಚ್ಚಿ ಉತ್ತರಾದಿಮಠದ ರಘುನಾಥ ತೀರ್ಥರು ಶ್ರೀಪಾದರಾಜ ಎಂದು ಕರೆದು ಆಶೀರ್ವಾದಿಸಿದರು. ಮುಳುಬಾಗಿಲಿನ ಸಂಸ್ಥಾನವೂ ಶ್ರೀಪಾದರಾಜಮಠವೆಂದೇ ಪ್ರಖ್ಯಾತಿ ಪಡೆದಿದೆ. ಇವರು ಉಗಾಭೋಗ, ಸುಳಾದಿ, ಕೀರ್ತನೆ, ದಂಡಕ, ವೃತ್ತನಾಮಾದಿ ಕೃತಿಯನ್ನು ರಚಿಸಿ ಹಾಡಿದರು. ಇವರ ಭಕ್ತಿ ಸಾಹಿತ್ಯ ಅವರ ಶಿಷ್ಯ ವ್ಯಾಸರಾಯರಿಂದ ಮುಂದುವರೆಯಿತು. ಇವರ ಅಂಕಿತನಾಮ "ಶ್ರೀರಂಗವಿಠಲ". ಶ್ರೀಪಾದರಾಜರು ತಮ್ಮ ಗುರುಗಳಾದ ಸ್ವರ್ಣತೀರ್ಥರೊಂದಿಗೆ ಅನೇಕ ವರ್ಷಗಳ ಕಾಲ ತಮಿಳುನಾಡಿನಲ್ಲಿ ಶ್ರೀರಂಗದಲ್ಲಿ ನೆಲೆಸಿದ್ದರು. ಅಲ್ಲಿ ಜನಸಾಮಾನ್ಯರಲ್ಲಿದ್ದ ಭಕ್ತಿ ಧರ್ಮ ತತ್ವಗಳನ್ನರಿಯುವ ಅದಮ್ಯಬಯಕೆಯನ್ನು ಹೊಂದಿದ್ದರು. ಶ್ರೀಪಾದರಾಜರಿಂದ ಕನ್ನಡಲ್ಲಿ ಕೀರ್ತನ ಸಾಹಿತ್ಯ ಬೆಳಗಿದ್ದು ಅವರಲ್ಲಿ ಅಡಗಿದ್ದ ಶಾಸ್ತ್ರಜ್ಞಾನ, ಪುರಾಣ ಪ್ರಜ್ಞೆ, ಪಾಂಡಿತ್ಯಪ್ರಖರತೆಗಳೊಂದಿಗೆ ಕೀರ್ತನೆಗಳು ಹೊರಬಂದವು. ಶ್ರೀಪಾದರಾಜ>ವ್ಯಾಸರಾಯರು> ಪುರಂದರದಾಸರು> ಕನಕದಾಸರು ಈ ನಾಲ್ಕು ದಾಸರು ಒಂದೇ ಉದ್ದೇಶದಿಂದ ಒಬ್ಬೊಬ್ಬರು ನೂರಾರು ಕೀರ್ತನೆಯನ್ನು ರಚಿಸಿದ್ದು ಐತಿಹಾಸಿಕ ಸತ್ಯ. ಈ ಗುರುಶಿಷ್ಯರಿಂದ ಸಂಖ್ಯಾ ದೃಷ್ಟಿಯಿಂದ ವಸ್ತುವೈವಿದ್ಯ, ವ್ಯಾಪ್ತಿ, ಸತ್ವ, ತತ್ವಪ್ರಚಾರ, ಪ್ರಸಾರಗಳ ದೃಷ್ಟಿಯಿಂದ ಇವರ ಕಾಲವನ್ನು ಸುವರ್ಣಯುಗವೆಂದೇ ಕರೆದಿದ್ದಾರೆ. ಪುರಂದರದಾಸರೊಬ್ಬರು.

ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಕೃತಿಗಳನ್ನು ರಚಿಸಿದ್ದಾರೆಂದು ಹೇಳಿದರೂ ಕೂಡಾ ಸದ್ಯ ದೊರೆತಿರುವ ಸಂಖ್ಯೆ 1000 ಸಾವಿರ.

### 3) ವ್ಯಾಸರಾಯ: (ಕ್ರಿ.ಶ. 1447–1539)

ವ್ಯಾಸರಾಯರು ವಿಜಯನಗರದ ಕೃಷ್ಣದೇವರಾಯನ ಗುರುಗಳಾಗಿದ್ದರು, ಶ್ರೀಪಾದರಾಜರ ಶಿಷ್ಯರು, ಅವರಲ್ಲಿ ಹನ್ನೆರಡು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದವರು. ಬನ್ನೂರಿನ ಬಲ್ಲಣಸುಮತಿ–ಲಕ್ಷ್ಮೀದೇವಿ ದಂಪತಿಗಳ ಕಿರಿಯ ಮಗನಾಗಿ ಹುಟ್ಟಿದ ವ್ಯಾಸರಾಯರ ಪೂರ್ವಾಶ್ರಮದ ಹೆಸರು 'ಯತಿರಾಜ' ಬ್ರಹ್ಮಣ್ಯ ತೀರ್ಥರಿಂದ ಸನ್ಯಾಸದೀಕ್ಷೆ ನಂತರ ಬಾಲಕನಿಗೆ ವ್ಯಾಸತೀರ್ಥರೆಂದು ನಾಮಕರಣ, ವಿಜಯನಗರದ ಅರಸುಗಳಿಗೆ ರಾಜಗುರುವಾಗಿದ್ದರು, ಆರುಜನ ವಿಜಯನಗರ ಅರಸುಗಳಿಗೆ ರಾಜಗುರುವಾಗಿ 'ಕುಹೂಂರೋಗ'ವನ್ನು ನಿವಾರಿಸಿ ರಾಜಮರ್ಯಾದೆಯನ್ನು ಪಡೆದಿದ್ದರು. ಸಾಂಸ್ಕೃತಿ ಕನ್ನಡ ದ್ವಿಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು. ಸಂಸ್ಕೃತದಲ್ಲಿ 'ತರ್ಕತಾಂಡ'ವು 'ಚಂದ್ರಿಕಾಚಾರ್ಯ' 'ನ್ಯಾಯಾವೃಂತ' ಮೊದಲಾದ ವಿದ್ವತ್ ಗ್ರಂಥ ರಚಿಸಿದ್ದರು. ಬಿಜಾಪೂರದ ಆದಿಲ್ ಷಾಹಿಯಿಂದ ರಾಜಮರ್ಯಾದೆ ಪಡೆದವರು.

ವ್ಯಾಸರಾಯರ ಅಂಕಿತನಾಮ 'ಶ್ರೀಕೃಷ್ಣ' 'ಸಿರಿಕೃಷ್ಣ', 'ಕೃಷ್ಣ' ಎಂಬ ಅಂಕಿತದಲ್ಲಿ ನೂರಾರ ಕನ್ನಡ ಕೀರ್ತನೆಗಳನ್ನು ರಚಿಸಿದ್ದಾರೆ. ವಿಜಯನಗರದ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿದ್ದರು ವ್ಯಾಸರಾಯರು ವಿದ್ಯಾದಾನ ಗ್ರಂಥರಚನೆಗಳಿಂದ ಸಾಹಿತ್ಯ ಸಂಗಿತ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದರು. ಸಂಗೀತ ವಿದ್ಯಾ ಸಂಪ್ರದಾಯ ಪ್ರವರ್ತಕರು ವ್ಯಾಸರಾಯರು.

### 4) ವಾದಿರಾಜರು (ಕ್ರಿ.ಶ. 1480–1600)

ವಾದಿರಾಜರ ವ್ಯಾಸರಾಯರ ಪ್ರಮುಖ ಶಿಷ್ಯರು, ಇವರ ಕೀರ್ತನೆಗಳ ಅಂಕಿತ 'ಹಯವದನ' ಅಂಕಿತದಿಂದ ಕನ್ನಡದಲ್ಲಿ ಕೀರ್ತನೆ ರಚಿಸಿದ್ದಾರೆ. 'ರಾಮಾಚಾರ್ಯ ಸರಸ್ವತಿ' ವಾದಿರಾಜರ ತಂದೆ ತಾಯಿಗಳು, ಇವರು ಹುಟ್ಟಿದ ಊರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪೂರ ತಾಲೂಕಿನ ಹೂವಿನ ಕೆರೆಗ್ರಾಮ ಇವರ ಪೂರ್ವಾಶ್ರಮದ ಹೆಸರು **'ವರಾಹ'** ಎಂಟು ವರ್ಷದಲ್ಲಿ ಬಾಲಕನಿಗೆ ಸನ್ಯಾಸ ದೀಕ್ಷೆಯಿತು ವಾದಿರಾಜರು ಎಂದು ನಾಮಕರಣ ಮಾಡಿದರು.

ಇವರ ದೀಕ್ಷಾಗುರು ವಗೀಶತೀರ್ಥರು. ವಾದಿರಾಜರು ತತ್ವಶಾಸ್ತ್ರದ ವಿವಿಧ ಶಾಖೆಗಳಲ್ಲಿ ಕೃತ ಪರಿಶ್ರಮರಾದರು. ರಾಜನೀತಿ, ಮುಂತಾದ ಶಾಸ್ತ್ರಗಳಲ್ಲಿ ವಿದ್ವಾಂಸರಾಗಿದ್ದರು. ವಾದಿರಾಜರು ಭಾಗವತ ಧರ್ಮದ ಪ್ರಸಾರ ಮಾಡಿದ ನಾಲ್ವರು ಯತಿವರೇಣ್ಯರಲ್ಲಿ ಒಬ್ಬರೆಂದು ಪ್ರಸಿದ್ಧರಾಗಿದ್ದಾರು. ವಾದಿರಾಜ ಸ್ವಾದಿ ಮಠಾಧಿಪತಿಗಳಾಗಿದ್ದರು. ಮಹಾಭಾರತ ಟಿಪ್ಪಣಿ, 'ಸರಸಭಾರತೀ ವಿಲಾಸ', 'ತತ್ತ್ವಪ್ರಕಾಶಿಕಾ ಟಿಪ್ಪಣ', 'ತಂತ್ರಸಾರ ಟೀಕಾ' ಮುಂತಾದ ಉದ್ಧಾಮಗ್ರಂಥಗಳನ್ನು, ವೈಕುಂತ ವರ್ಣನೆ, ಗುಂಡ ಕ್ರಿಯಾ, ಭ್ರಮರಗೀತ ಮುಂತಾದ ನುರಾರು ಸುಳಾದಿಗಳನ್ನು ದೇವರ ನಾಮಗಳನ್ನು ರಚಿಸಿದ್ದಾರೆ. 'ತಾಳುವಿಕೆಗಿಂತ ತಪವು ಇಲ್ಲ ಎಂಬುದು ಇವರ ಸಂದೇಶ.

### 5) ಪುರಂದರ ದಾಸರ (ಕ್ರಿ.ಶ. 1484–1564)

ಪುರಂದರ ದಾಸರು ವ್ಯಾಸರಾಯರ ಪ್ರಮುಖ ಶಿಷ್ಯರು, ದಾಸಕೂಟದಲ್ಲಿಯೇ ಅತ್ಯಂತ ಜನಪ್ರಿಯರು. ಈ ಪುಣ್ಯಪುರುಷನ ಅಂಕಿತನಾಮ 'ಪುರಂದರ ವಿಠಲ'. ಗುರುಮನೆಯ ಪರಿಸರದಲ್ಲಿದ್ದ ಕನ್ನಡ ಹರಿದಾಸ ಸಾಹಿತ್ಯವನ್ನು ನೇರವಾಗಿ ಜನರ ಬಾಗಿಲಿಗೆ ಒಯ್ದುವರು. "ಗುರುಗಳಿಂದ ದಾಸರೆಂದರೆ ಪುರಂಪದರ ದಾಸರಯ್ಯ" ಎನ್ನುವ ಮೆಚ್ಚುಗೆಗೆ ಪಾತ್ರರಾದವರು. ಸಾವಿರಾರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿ ಹಾಡಿ ಜನಮನವನ್ನು ತಣಿಸಿದ ಕೀರ್ತಿ ಇವರಿಗುಂಟು, ಪುರಂದರದಾಸರ "ಜೀವನ ಕುರಿತು ಅಧಿಕೃತ ಮಾಹಿತಿ ಎಂದರೆ 1527 ರ ಕಮಲಾಪುರದ ತಾಮ್ರ ಶಾಸನವೊಂದೇ ಅದರ ಆಕರ. ಅದರ ಪ್ರಕಾರ ಪುರಂದರದಾಸರು ವಸಿಷ್ಠ ಗೋತ್ರದ ಯಜುರ್ವೇದಿಗಳು, ಅವರಿಗೆ ಲಕ್ಷಣದಾಸ, ಹೇಬಣದಾಸ, ಮಧ್ವಪದಾಸ ಎಂಬ ಮೂರು ಗಂಡು ಮಕ್ಕಳಿದ್ದರು"[4]

ಪುರಂದರ ದಾಸರ ಪೂರ್ವಾಶ್ರಮದ ಹೆಸರು ಶ್ರೀನಿವಾಸನಾಯಕ, ಪುರಂದರದಾಸರ ಕೃತಿಗಳಿಂದ ಗ್ರಹಿಸಬಹುದಾದ ವಿಷಯ–ಆಗರ್ಭ ಅಪಾರ ಸಂಪತ್ತಿನ ಒಡೆಯನಾಗಿದ್ದರು, ಇವರಿಗೆ ಅಭಿನವ ಕುಬೇರನೆಂದೇ ಕರೆಯುತ್ತಿದ್ದರು. ಹೆಂಡತಿಯ ದೆಸೆಯಿಂದ ಹರಿಭಕ್ತಿಯತ್ತ ವಾಲಿ ಎಲ್ಲವನ್ನೂ 'ಕೃಷ್ಣಾರ್ಪಣ' ಆ ಶ್ರೀಹರಿಗೆ ಅರ್ಪಿಸಿ ಹರಿದಾಸರಾದರು. ಇವರನ್ನು ಹರಿದಾಸ ಸಾಹತಿಯ ಅಶ್ವಿನಿದೇವತೆಯಂದೇ ಕರೆಯುತ್ತಾರೆ.

ಪುರಂದರ ದಾಸಕರು ಗುರುವಿನಿಂದ ದೀಕ್ಷೆ ಪಡೆದು ಶೋಲಾಪುರ, ಉತ್ತರ ಕರ್ನಾಟಕ ಪ್ರಾಂತಗಳನ್ನು ಸಂಚರಿಸಿ ಹರಿಕೀರ್ತನೆಗಳನ್ನು

[4] ದಾಸ ಸಾಹಿತ್ಯ ಸೌರಭ, ಬಿ.ಎನ್. ನಾಗರತ್ನ

ಹಾಡುತ್ತ ಊರೂರು ಅಲೆದಾಡಿದರು. ಕೊನೆಗೆ ಕೃಷ್ಣದೇವರಾಯನ ರಾಜ್ಯಭಾರ ಕಾಲದಲ್ಲಿ ವಿಜಯನಗರಕ್ಕೆ ಬಂದು ನೆಲಸಿದರು. ವರದಪ್ಪ, ಗುರಪ್ಪ, ಅಭಿನವಪ್ಪ, ಮಾಧವಪತಿ ಎಂಬ ನಾಲ್ವರೂ ಪುತ್ರರು ಒಬ್ಬ ಮಗಳೂ ಇದ್ದರು. ಸಂಸಾರ ಸಮೇತ ವಿಜಯನಗರದಲ್ಲಿದ್ದಿದ್ದು ಇತಿಹಾಸ ಮುಂದೆ ವಿರಕ್ತರಾಗಿ ಹರಿಭಕ್ತಿ ಸಾಧನೆಯೇ ಮೋಕ್ಷ ಮಾರ್ಗವೆಂದು ಅನವರತವೂ ಬೋಧಿಸುತ್ತ ಲೋಕ ಪ್ರಸಿದ್ದರಾದರು. ಅದುವರೆಗೆ ಧನದಾಸರಾಗಿದ್ದ ಪುರಂದರದಾಸರು ಜ್ಞಾನೋದಯದಿಂದ ಹರಿದಾಸರಾಗಿ ಸಮಗ್ರ ಭಾರತದ ಅದ್ವಿತಿಯ ಸಂತ ಮಹಾಪುರುಷರಾದರು. "ಯೋಗ, ಜ್ಞಾನ, ಭಕ್ತಿ ಮಾರ್ಗಗಳಿಂದ ನಿರ್ಗುಣ ಪರಮಾತ್ಮನನ್ನು ಸಾಕ್ಷಿತ್ಕಾರಪಡಿಸಿಕೊಂಡ ಪುರಂದದಾಸರು ದೇಶದ ಸಂತ ಪರಂಪರೆಯಲ್ಲಿ ತುಳಸಿದಾಸ, ಸೂರದಾಸ, ಕಬೀರದಾಸರೊಡನೆ ತುಲನೀಯರಾಗಿದ್ದಾರೆ. ಪ್ರೊ. ರಾನಡೆಯವರು ತಿಳಿಸುವಂತೆ ತುಳಸಿದಾಸನು ಸಗಣೋಪಾಸನೆಯ ಮಟ್ಟಕ್ಕೆ ಬಂದು ನಿಂತನು. ಕಬೀರದಾಸನ ನಿರ್ಗುಣೊಪಾಸನೆಯ ಘಟ್ಟಕ್ಕೆ ಬಂದನು. ಪುರಂದರದಾಸರು ಸಗುಣೋಪಾಸನೆಯಿಂದ ಪ್ರಾರಂಭಿಸಿ ಸಗುಣ ನಿರ್ಗುಣೋಪಾಸನೆಗಳೆರಡನ್ನೂ ಸಮೀಕರಿಸಿದ ಪರಮಯೋಗಿಗಳಾದರು.

ಪ್ರಕೃತಿಯಲ್ಲಿ ದ್ವೈಧೀಭಾವವು ಅಂತರ್ಗತವಾಗಿದೆಯೆಂದು ಪುರಂದರದಾಸರು ಖಚಿತವಾಗಿ ನಂಬಿದ್ದರು. ಮಾನವನು ಅಣುಮಹತ್ತುಗಳ ಬೆರಕೆ, ಈಸಬೇಕು ಇದ್ದು ಜಯಿಸಿಬೇಕು, ಎಂಬ "ಕಿರ್ತನೆ ಕರ್ತವ್ಯ ನಿರ್ವಹಣೆಯ ಮೋಕ್ಷ ಮಾರ್ಗವನ್ನು ಸಾಧನೆಯಿಲ್ಲದೆ, ದಿವ್ಯಪ್ರೀತಿ ಮಾಧುರ್ಯವು ಅನುಭವಕ್ಕೆ ಬರುವುದಿಲ್ಲ. "ಅಂಬರದ ಆಳವನು ರವಿ–ಶಶಿಯಲ್ಲದೆ ತಳದಲ್ಲಿ ಹಾರುವ ಪಕ್ಷಿಗಳು ಬಲ್ಲವೆ?" 'ಜೀವೇಶ್ವರತತ್ತ್ವ' ನಿರೂಪಣ ಸಂದರ್ಭದಲ್ಲೂ ಪುರಂದರದಾಸರು ಮಾನವ ಜೀವಿತದ ಮಹತ್ವವನ್ನು ವಿಸ್ತಾರಿಸುತ್ತಾರೆ. ನೈತಿಕ ಮಹತ್ವವನ್ನು ಸ್ಪಷ್ಟಪಡಿಸುತ್ತಾ–

ಮಾನವಜನ್ಮದೊಡ್ಡದು.. . .. ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ
ಕಣ್ಣುಕೈ ಕಾಲ್ ಕಿವಿ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಗಳಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿಕೋ
ಸುಳ್ಳಿನ ಸಂಸಾರದ ಸುಳಿಗೆ ಸಿಕ್ಕಲುಬೇಡಿ

ಎಂದು ಹಾಡುತ್ತಾರೆ. ಮನುಷ್ಯ ಸ್ವಾಭಾವ ಕುರಿತು–
ಪಟ್ಟದರಸಿಯ ಬಿಟ್ಟು ಪರಸತಿಯ ಬಯಸುವವರು ಎಂದು ಹೇಳುತ್ತಾ ಚಾಡಿಕೋರರು, ಕುಹಕಿಗಳು ಕೊಂಡೆಯರ ಕುರಿತು–

ನಿಂದಕರಿರಬೇಕು
ಹಂದಿಯಿದ್ದರೆ ಕೇರಿ ಹೀಗೆ ಶುದ್ಧವೊ ಹಾಗೆ

ಸಮಾಜದ ನಾನಾಗುಣ ಸ್ವಾಭಾವಗಳ ಜನರಿಂದ ತುಂಬಿರುವುದರಿಂದ ವ್ಯಕ್ತಿಗೆ ಸಂಕಟಯಾತನೆಗಳು ತಪ್ಪಿದ್ದಲ್ಲ.

ಆಚಾರವಿಲ್ಲದ ನಾಲಿಗೆ ನಿನ್ನ
ನೀಚಗುಣವ ಬಿಡುನಾಲಿಗೆ
ನಾಚಿಕೆ ಲಜ್ಜೆಯನೀ ಮುನ್ನ ಅರಿಯದೆ
ಬಾಚಿಕೊಂಡಿರುವಂಥ ನಾಲಿಗೆ

"ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದನೆ ಕಂಡು
ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ
ಮಡಿ ಮಾಡುವ ಬಗೆ ಬೇರುಂಟು
ಹೊಟ್ಟೆಯೊಳಗಿನ ಕಾಮ ಕ್ರೋಧಗಳ ಬಿಟ್ಟರೆ ಅದು ತಾ ಮಡಿಯೋ.

ಪುರಂದರದಾಸರು ಸಮಾನತೆಯೇ ಪ್ರಧಾನವಾಗಿರುವ ಸಮಾಜ ರಚನೆಗೆ ಬಯಸಿದ ಮಹಾನುಭಾವರು.
ನಿಸರ್ಗದತ್ತಾವಾಗುವ ಭಾಗ್ಯವನ್ನು ಮೋಕ್ಷ ಸಿದ್ಧಿಗೆ ಸಾಧನವಾಗಿ ಬಳಸಬೇಕು.

'ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮಾ ನೀ
ಸೌಭಾಗ್ಯದ ಲಕ್ಷ್ಮೀ ಬಾರಮ್ಮ'

ಎಂಬ ಕೀರ್ತನೆಯಲ್ಲಿ ಪುರಂದದಾಸರು ಜೀವನದ ಆತ್ಯಂತಿಕ ಸಿದ್ಧಿಗಾಗಿ ಸರ್ವರಿಗೂ ಈ ಭಾಗ್ಯ ಲಭಿಸಲೆಂದು ದಾಸರು ಹಾರೈಸುತ್ತಾರೆ.

**ಕೊನೆಯ ಮಾತು**

ಸಮಾಜದ ಬದುಕಿಗೆ ನೆಮ್ಮದಿ ತಂದುಕೊಟ್ಟ ಕೀರ್ತಿ ಹರಿದಾಸರದು. ಉತ್ತಮಮೌಲ್ಯಗಳನ್ನು ಒತ್ತಿ ಒತ್ತಿ ಹೇಳಿದರು. ಜನರಲ್ಲಿ ಜೀವನಾಭಿರುಚಿ ತುಂಬಿದರು. ಜಾತಿಧರ್ಮಗಳು ಮನುಷ್ಯನ ಹುಟ್ಟಿನಿಂದಲ್ಲ. ಸಂಸ್ಕಾರದಿಂದ ಬರುವಂಥವು ಎನ್ನುವ ವಿಚಾರವಾಗಲಿ,

ಮಾನವ ಜನ್ಮ ದೊಡ್ಡದು ಎನ್ನುವ ದೇಶೋವಿಶಾಲ ದೃಷ್ಟಿಯಾಗಲೀ ವಿಧವೆಯರನ್ನುದ್ದೇಶಿಸಿದ ಮಂಡೆ ಬೋಳಾದರೆ ಮನಬೋಳೇ? ಎನ್ನುವಂತ ಮಾನವೀಯತೆಯಗಲಿ, ಎಂದಿಗಿಂತ ಇಂದು ನಮಗೆ ಹೆಚ್ಚು ಮೌಲಿಕವಾಗಿ ಕಾಣುತ್ತಿದೆ. ಹರಿದಾಸರಲ್ಲಿ ಕಾಣುವ ಗುರುಶಿಷ್ಯ ಸಂಬಂಧ, ಪ್ರೀತಿ ವಾತ್ಸಲ್ಯಗಳು, ಪರಸ್ಪರ ವ್ಯಕ್ತವಾಗಿರುವ ಮುಕ್ತಮನಸ್ಸಿನ ಮೆಚ್ಚುಗೆಯಂತಹ, ಮನಸ್ಸಿನ ಸಂಸ್ಕಾರ ಇಂದು ನಮಗೆ ಅನಿವಾರ್ಯವಾಗಿ ಬೇಕಾಗಿದೆ.

ದಿನೇ ದಿನೇ ಹೆಚ್ಚುತ್ತಿರುವ ಕ್ರೌರ್ಯ, ಹಿಂಸೆ ಅನೀತಿ ಹೆಮ್ಮರವಾಗಿ ಬೆಳೆದು ನಿಂತಿರುವ ಭ್ರಷ್ಟಾಚಾರ, ಮೋಸ, ವಂಚನೆಗಳಿಗೆ ಪ್ರೀತಿ ಮೂಲವಾದ ಹರಿದಾಸ ಸಾಹಿತ್ಯ ಬಿತ್ತರಿಸುವ ಜೀವನದ ಪ್ರೀತಿ, ಪರಿಶುದ್ಧ ಬಾಳ್ವೆ, ಉತ್ತಮ ಮೌಲ್ಯಗಳು ಪರಿಹಾರವನ್ನು ಸೂಚಿಸಿ, ಮನುಷ್ಯಮನುಷ್ಯನಾಗಿ ಬಾಳುವ ಬಗೆಯನ್ನು ಈ ದಾಸ ಸಾಹಿತ್ಯ ಪ್ರತಿಪಾದಿಸುವುದು.

**ಗ್ರಂಥಋಣ**


1. ಕವಿ ಕನಕದಾಸರು: ಕಟ್ಟಿ ಶೇಷಾಚಾರ್ಯರು" ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1938
2. ರಾಮಧಾನ್ಯಚರಿತ್ರೆ –ಸಂ.ದೇ. ಜವರೇಗೌಡ, ರಾಜ್ಯ ಸಮಿತಿ, ಶ್ರೀ ಕನಕದಾಸ ನಾಲ್ಕನೆಯ ಶತಮಾನೋತ್ಸವ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು, 1965.
3. ನಳಚರಿತ್ರೆ ಸಂಗ್ರಹ – ಸಂ. ಡಾ. ಬಿ.ವ್ಹಿ. ಶಿರೂರ, ಚಂದ್ರನಾಥ ಪ್ರಕಾಶನ, ಧಾರವಾಡ, 1981
4. ಸಮಾವೇಶ: ಸಿ.ಪಿ.ಕೆ. ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು, 1971
5. ಬಯಲು ಆಲಯದೊಳಗೊ: ಸಂ. ಡಾ.ರಾಜಶೇಖರ ಮಠಪತಿ

2016, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು.

6. ಮಹಾತ್ಮ ಕನಕದಾಸ: ರಾಜ್ಯ ಸಮಿತಿ ಶ್ರೀಕನಕದಾಸರ ನಾಲ್ಕನೆಯ ಶತಮಾನೋತ್ಸವ ರವೀಂದ್ರ ಕಲಾಕ್ಷೇತ್ರ ಬೆಂಗಳೂರು, 1985
7. ಕನಕದಾಸರ ಕೃತಿಯಲ್ಲಿ ಸಮನತಾ ಸಮಾಜ: ಡಾ.ನರಸಿಂಹಮೂರ್ತಿ ಹೂವಿನಹಳ್ಳಿ, ಪ್ರೇರಣ ಪ್ರಕಾಶನ, ಬೆಂಗಳೂರು, 2009
8. ಕನಕದಾಸರ ಕಾವ್ಯಭಾಗ–1: ಸಂ.ಡಾ.ಸಾ.ಶಿ. ಮರುಳಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012
9. ಸಂತಕವಿ ಕನಕದಾಸರು: ಡಾ.ಚಿಕ್ಕಮಗಳೂರು ಗಣೇಶ, ರಾಷ್ಟ್ರೀಯ ಸಂತಕವಿ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, 2016
10. ಕನಕದಾಸರ ಸಾಹಿತ್ಯದ ತಾತ್ವಿಕ ನೆಲೆಗಳು: ಡಾ.ಕೆ.ಕೇಶವಶರ್ಮ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2016
11. ಕನಕ ಮರುದರ್ಶನ: ಸಂ. ಡಾ. ಬಂಜಗೆರೆ ಜಯಪ್ರಕಾಶ ರಾಷ್ಟ್ರೀಯ ಸಂತಕವಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, 2015
12. ರಾಮಧಾನ್ಯ ಚರಿತ್ರೆ: ಸಂ. ಹೊರಪೇಟೆ ಮಲ್ಲೇಶಪ್ಪ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, 2015
13. ಮುತ್ತು ಬಂದಿದೆ ಕೇರಿಗೆ: ಡಾ.ಸುರೇಶ ನಾಗಲಮುಡಿಕೆ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ 2016
14. ಹಳ್ಳಿಯ ಅಧ್ಯಯನ ಕಾಗಿನೆಲೆ: ಹೊರೆಯಾಲ ದೊರೆಸ್ವಾಮಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
15. ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ: ಡಾ. ಶಿವಾನಂದ ಕೆಳಗಿನಮನಿ ಅನ್ನಪೂರ್ಣ ಪಬ್ಲಿಕೇಷನ್, ಬೆಂಗಳೂರು, 2015
16. ಕನಕದಾಸ : ಟಿ.ಎನ್. ನಾಗರತ್ನ, ಸಾಹಿತ್ಯ ಅಕಾಡೆಮಿ ಬೆಂಗಳೂರು 2000
17. ಕನಕದಾಸರ ಕಾವ್ಯಭಾಗ–2: ಸಂ. ಪ್ರೊ. ಸುಧಾಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2013
18. ಕನಕದಾಸರ ಕೃತಿಗಳು ಜನಪದೀಯ ಅಧ್ಯಯನ : ಡಾ.ಹಜರತಸಾಬ ನದಾಫ್, ಸಿರಾ ಪಬ್ಲಿಷಿಂಗ್ ಹೌಸ್, ಮೈಸೂರು, 2017
19. ಕನಕ ಚಿಂತನ 2011–2012: ಡಾ.ಬಿ.ಶಿವರಾಮಶೆಟ್ಟಿ, ಕನ್ನಡ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ, 2013
20. ಕನಕಾವಲೋಕನ : ಸಂ.ಡಾ. ದೇ. ಜವರೇಗೌಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
21. ನಳಚರಿತ್ರೆ: ಒಂದು ಹೊಸನೋಟ; ಡಾ.ಬಿ.ಬಿ. ಬಿರಾದಾರ ಪ್ರಸಾರಾಂಗ, ಕ.ವಿ.ವಿ. ಧಾರವಾಡ. 2008.